# 6 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ
# ಬೆಂಗಳೂರು ನಗರ

## ಸಿ.ಸಿ.ನಂ.692/2021

| | | | | |
|---|---|---|---|---|
| ಪಿರ್ಯಾದುದಾರರು ರಾಜ್ಯ ಪರ | ಃ | | | ಮೈಕೋ ಲೇಔಟ್ ಪೊಲೀಸ್ ಠಾಣೆ ಬೆಂಗಳೂರು |
| | | ವಿರುದ್ಧ | | |
| ಆರೋಪಿಗಳು | | | ಆ-1 | ಪ್ರಕಾಶ್ ಕುಮಾರ್ ರೆಡ್ಡಿ ಬಿನ್ ಲೇಟ್ ಕೃಷ್ಣರೆಡ್ಡಿ |
| | | | ಆ-2 | ವಿಕ್ಟರ್ ವೆಂಕಟೇಶ್ |
| | | | ಆ-3 | ಪ್ರೀತಿ |

-- -- --

## ಃ ದೋಷಾರೋಪಣೆ ಃ

ರಾಘವೇಂದ್ರ ವೈಜನಾಥ, 6 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು ನಗರ, ಆದ ನಾನು ಈ ಕೆಳಕಂಡಂತೆ ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ ಏನೇಂದರೆಃ-

ಮೊದಲನೆಯದಾಗಿ 1 ರಿಂದ 3 ನೇ ಆರೋಪಿಗಳಾದ ನೀವು ಸಮಾನ ಉದ್ದೇಶವುಳ್ಳವರಾಗಿ ದಿನಾಂಕ 14.07.2020 ರಂದು ಮದ್ಯಾಹ್ಷ 03-00 ಗಂಟೆ ಸಮಯದಲ್ಲಿ ಬೆಂಗಳೂರಿನ ಬಿಟಿಎಂ 2 ನೇ ಹಂತ, 19 ನೇ ಮುಖ್ಯರಸ್ತೆ, 4 ನೇ ಕ್ರಾಸ್ , ನಲ್ಲಿರುವ ಪಿ.ಜಿ.ಯಲ್ಲಿ ದೋ.ಸಾ.1 ರವರ ಜೊತೆ ಜಗಳ ತೆಗೆದಿದ್ದು ದೊ.ಸಾ.1 ರವರ ರೂಂ ಗೆ ಅತಿಕ್ರಮ ಪ್ರವೇಶ ಮಾಡಿ ಆ ಮೂಲಕ ಭಾದಂಸ ಕಲಂ 448 ಸಹ ಕಲಂ 34 ರ ಅಡಿ ಶಿಕ್ಷಾರ್ಹ ಆರೋಪವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ ಅದೇ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ರಿಂದ 3 ನೇ ಆರೋಪಿಗಳಾದ ನೀವು ಸಮಾನ ಉದ್ದೇಶವುಳ್ಳವರಾಗಿ ದೋ.ಸಾ.1 ರವರ ಜೊತೆ ಜಗಳ ತೆಗೆದು ಪಿ.ಜಿ.ಯನ್ನು ಖಾಲಿ ಮಾಡುವಂತೆ ಹೇಳಿ ಆರೋಪಿಗಳಾದ ನೀವು ಕೈಗಳಿಂದ ದೋ.ಸಾ.1 ರವರಿಗೆ ಹೊಡೆದು ದೋ.ಸಾ.1 ರವರ ಸೂಟ್ ಕೇಸ್ ನ್ನು ಹೊರಹಾಕಿ ಅವರ ಮಾನಕ್ಕೆ ಕುಂದುಂಟಾಗುವಂತೆ ವರ್ತಿಸಿ ಆ ಮೂಲಕ ಭಾದಂಸ ಕಲಂ 354 ಸಹ ಕಲಂ 34 ರ ಅಡಿ ಶಿಕ್ಷಾರ್ಹ ಆರೋಪವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಮೇಲ್ಕಂಡ ದಿನಾಂಕ ಸ್ಥಳ ಹಾಗೂ ಸಮಯದಲ್ಲಿ 1 ರಿಂದ 3 ನೇ ಆರೋಪಿಗಳಾದ ನೀವು ಸಮಾನ ಉದ್ದೇಶವುಳ್ಳವರಾಗಿ ದೋ.ಸಾ.1 ರವರು ಪೋಷಣೆ ಮಾಡುತ್ತಿದ್ದ ಬ್ಲಾಕಿ ಎಂಬ ನಾಯಿಗೆ ಒಂದನೇ ಆರೋಪಿಯವರು ಕಾಲಿನಿಂದ ಒದ್ದು ಒಡಿಸಿದ್ದು ಆ ಮೂಲಕ ಕಲಂ 11 ರ ಪ್ರಿವಿನ್ ಷನ್ ಆಫ್ ಕ್ರೂಯಲ್ಟಿ ಟು ಅನಿಮಲ್ ಆಕ್ಟ್ ಅಡಿ ಶಿಕ್ಷಾರ್ಹ ಆರೋಪವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಮೇಲಿನ ದೋಷಾರೋಪಣೆ ಕುರಿತು ನಿಮ್ಮ ವಿರುದ್ಧ ನನ್ನ ಮುಂದೆ ವಿಚಾರಣೆ ನಡೆಸಲಾಗುತ್ತದೆ ಅಂತ ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ರಾಘವೇಂದ್ರ ವೈಜನಾಥ)
ದಿನಾಂಕಃ 29.03.2022. 6 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳು
ಬೆಂಗಳೂರು ನಗರ.

ಪ್ರ 1) ಮೇಲಿನ ದೋಷಾರೋಪಣೆ ಕುರಿತು ನಿಮಗೆ ಓದಿ ಹೇಳಿದ್ದು ತಿಳಿಯಿತೇ ?

ಉತ್ತರಃ

ಆ-1

ಆ-2

ಆ-3

ಪ್ರ 2) ಈ ಬಗ್ಗೆ ನೀವು ಏನು ಹೇಳುತ್ತೀರಿ? ಈ ದೋಷಾರೋಪಣೆ ಒಪ್ಪಿಕೊಳ್ಳುತ್ತೀರಾ? ಇಲ್ಲವೇ ವಿಚಾರಣೆ ನಡೆಸಬೇಕು ಎನ್ನುತ್ತೀರಾ?

ಉತ್ತರಃ

ಆ-1

ಆ-2

ಆ-3

(ಮೇಲಾಣಿಸಿದ ಆರೋಪಿಗಳಿಗೆ ನನ್ನ ಹಾಜರಾತಿಯಲ್ಲಿ ನಾನೇ ಖುದ್ದು ಮೇಲಿನ ದೋಷಾರೋಪಣೆಯನ್ನು ಅವರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟಿರುವ ಉತ್ತರಗಳನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

6 ನೇ ಅಪರ ಮುಖ್ಯ ಮಹಾನಗರ ದಂಡಾಧಿಕರಿಗಳು,
ಬೆಂಗಳೂರು ನಗರ .